ಇಂತಹ ಆಹಾರವನ್ನು ಬಳಸಿದಾಗ ಕಡಿಮೆ ಉತ್ಪಾದನೆಯ ಜೊತೆಗೆ ಮೀನಿನ ಬೆಳವಣಿಗೆಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ.

ಉತ್ತಮ ಇಳುವರಿ ಪಡೆಯಲು ಕಂಪೆನಿ ನಿರ್ಮಿತ ಕಾಳು ಆಹಾರವನ್ನು ಮೀನುಗಳ ಒಟ್ಟು ತೂಕದ ಶೇ. 4–5 ರಷ್ಟನ್ನು ಪ್ರತಿ ದಿನ ಬೆಳಿಗ್ಗೆ ಮತ್ತುಸಾಯಂಕಾಲ ನೀಡಬೇಕು. (ಆಹಾರ ತಯಾರಕರು ನೀಡುವ ಸೂಚನೆಗಳನ್ನು ಪಾಲಿಸಿ). ಪ್ರತಿ ದಿನ ನಿಗದಿತ ಸಮಯದಲ್ಲಿ ಆಹಾರವನ್ನು ನೀಡುತ್ತಿದ್ದರೆ. ಮೀನಿನ ಬೆಳವಣಿಗೆಯಲ್ಲಿ ಕಂಡುಬರುವ ವ್ಯತ್ಯಾಸವನ್ನು ತಪ್ಪಿಸಬಹುದು. ಪ್ರತಿ ಹದಿನೈದು ದಿನಕ್ಕೊಮ್ಮೆ ಶೇ. 10–20 ರಷ್ಟು ನೀರನ್ನು ಬದಲಿಸಿದರೆ ಒಳ್ಳೆಯದು. ಹೀಗೆ 150–180 ದಿನಗಳವರೆಗೆ ಸಾಕಣೆ ಮಾಡಿದರೆ (ಚದರ ಮೀಟರ್‌ಗೆಂದು ಮರಿ ಇಡುವಂತಹ ಕೊಳಗಳಲ್ಲಿ) ಸುಮಾರು 3–4 ಟನ್‌ಗಳವರೆಗೆ ಉತ್ಪಾದನೆಯನ್ನು ನಿರೀಕ್ಷಿಸಬಹುದು.

ಕೃಷಿಕರಲ್ಲೇ ಲಭ್ಯವಿರುವ ವ್ಯವಸಾಯದ ಉತ್ಪನ್ನಗಳಾದ ಮೆಕ್ಕೆ ಜೋಳದ ಪುಡಿ, ಗಿರಣಿಯ ತ್ಯಾಜ್ಯ, ತೌಡು, ಉಪಯೋಗಿಸಿ ಕೊಂಡು ಕೃತಕ ಆಹಾರವಾಗಿ ನೀಡಬಹುದು.

### ನೀರಿನ ಗುಣಮಟ್ಟ ಮತ್ತು ಮೀನುಗಳ ಬೆಳವಣಿಗೆ ಪರಿಶೀಲಿಸುವುದು

- ಕೊಳದ ನೀರು ಹೆಚ್ಚು ಹಸಿರಾಗಿ (ಪಾಚಿ) ಇದ್ದರೆ ಅಥವಾ ಹೆಚ್ಚು ಕಂದು ಬಣ್ಣಕ್ಕೆ ತಿರುಗಿದರೆ, ಸ್ವಲ್ಪ ಕೊಳದ ನೀರನ್ನು ಹೊರಬಿಟ್ಟು ಅಷ್ಟೇ ಪ್ರಮಾಣದ ನೀರನ್ನು ಕೊಳಕ್ಕೆ ಹೊಸದಾಗಿ ತುಂಬಿಸಬೇಕು ಹಾಗೂ ಸ್ವಲ್ಪ ಕಾಲ ಗೊಬ್ಬರ ಹಾಕುವುದನ್ನು ನಿಲ್ಲಿಸಬೇಕು.
- ಆಗಿಂದಾಗ್ಗೆ ಕೊಳದಲ್ಲಿನ ನೀರಿನ ರಸಸಾರವನ್ನು ಪರೀಕ್ಷಿಸಬೇಕು. ನೀರಿನ ರಸಸಾರ 7.0ಕ್ಕಿಂತ ಮೇಲ್ಪಟ್ಟು ಇರುವಂತೆ ನೋಡಿಕೊಳ್ಳಬೇಕು. ಕೊಳದ ನೀರಿನ ರಸಸಾರ ಕಡಿಮೆಯಾದ್ದಲ್ಲಿ ಅಗತ್ಯ ಪ್ರಮಾಣದ ಸುಣ್ಣ ಸೇರಿಸಬೇಕು.
- ಎರಡು ಮೂರು ತಿಂಗಳಿಗೊಮ್ಮೆ ಬೀಸುಬಲೆ ಎಳೆಬಲೆ ಉಪಯೋಗಿಸಿ ಮೀನುಗಳ ಬೆಳವಣಿಗೆ ಮತ್ತು ಆರೋಗ್ಯ ವನ್ನು ಪರೀಕ್ಷಿಸಬೇಕು. ಅಗತ್ಯವಿದ್ದಲ್ಲಿ ಮೀನುಗಾರಿಕಾ ಇಲಾಖೆಯ ಅಧಿಕಾರಿಗಳಿಂದ ಅಥವಾ ಮೀನು ಕೃಷಿ ವಿಜ್ಞಾನಿಗಳಿಂದ ಮೀನುಗಳ ಆರೋಗ್ಯ ಮತ್ತು ಬೆಳವಣಿಗೆ ಬಗ್ಗೆ ಸಲಹೆ ಸೂಚನೆ ಪಡೆಯಬಹುದು.
- ಸಾಮಾನ್ಯವಾಗಿ ಮೀನುಗಳಿಗೆ ಯಾವುದೇ ಪ್ರಮುಖ ರೋಗ ಬರುವುದಿಲ್ಲ. ಅಕಸ್ಮಾತ್ ರೋಗ ಅಥವಾ ಪರೋಪ ಜೀವಿಗಳು ಕಾಣಿಸಿದರೆ ತಜ್ಞರನ್ನು ಭೇಟಿ ಮಾಡಬೇಕು.

### ಕೊಳದಿಂದ ಮೀನುಗಳನ್ನು ಹಿಡಿಯುವುದು

- ಮೇಲೆ ತಿಳಿಸಿದಂತೆ ವೈಜ್ಞಾನಿಕ ರೀತಿಯಲ್ಲಿ ಮೀನು ಸಾಕಣೆ ಕೈಗೊಂಡಲ್ಲಿ ಮೀನುಗಳು 10 ರಿಂದ 12 ತಿಂಗಳುಗಳ ಅವಧಿಯಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಮೀನು 1 ಕೆ.ಜಿ. ಯಿಂದ 1.5 ಕೆ.ಜಿ. ಗಾತ್ರಕ್ಕೆ ಬೆಳೆಯುತ್ತದೆ.
- ಮೀನುಗಳನ್ನು ಹಿಡಿಯುವ ಮೊದಲು ಕೊಳದ ನೀರಿನ ಮಟ್ಟವನ್ನು ಕಡಿಮೆ ಮಾಡಿ ಎಳೆ ಬಲೆಯ ಸಹಾಯದಿಂದ ಮೀನುಗಳನ್ನು ಹಿಡಿಯಬೇಕು.
- ಕೊಳಕ್ಕೆ ನೆರೆಯ ಹಾವಳಿ ಸಂದರ್ಭವಿದ್ದಲ್ಲಿ ಅವಧಿಗಿಂತ ಮುಂಚಿತವಾಗಿ ಮೀನು ಹಿಡಿಯುವ ವ್ಯವಸ್ಥೆ ಮಾಡಿಕೊಳ್ಳುವುದು ಒಳ್ಳೆಯದು.

### ಮೀನುಗಳ ಮಾರಾಟ

ಕೊಳದಲ್ಲಿ ಬೆಳೆಸಿ, ಹಿಡಿದಂತೆ ಮೀನುಗಳನ್ನು ಕೊಳದ ಬಳಿಯೇ ಮಾರಾಟ ಮಾಡಬಹುದು ಅಥವಾ ಇನ್ನೂ ಹೆಚ್ಚಿನ ಲಾಭ ಪಡೆಯಲು ಹತ್ತಿರದ ಪೇಟೆ, ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಬಹುದು ಅಥವಾ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧಿಕಾರಿಗಳೊಡನೆ ಮೀನಿನ ಮಾರಾಟದ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುವುದು ಸೂಕ್ತ. ದೊಡ್ಡ ಪ್ರಮಾಣದಲ್ಲಿ ಬೆಳೆಸಿದಾಗ, ಹಿಡಿಯುವ ಮೊದಲೇ ಮಾರಾಟಗಾರರೊಂದಿಗೆ ಚರ್ಚಿಸಿ, ಬೆಲೆ ನಿಗದಿ ಮಾಡಿದ ನಂತರ ಮೀನು ಹಿಡಿಯಬೇಕು.

### 1000 ಮೀನು ಮರಿಗಳಿಗೆ ಕೊಡಬೇಕಾದ ಕೃತಕ ಆಹಾರದ ವಿವರ

| ಪ್ರತೀ ದಿನಕ್ಕೆ | 90 ದಿನಗಳಿಗೆ | | |
|---|---|---|---|
| ಮೊದಲನೆಯ | 90 ದಿನಗಳು | 200 ಗ್ರಾಂ | 18 ಕೆ.ಜಿ. |
| ಎರಡನೆಯ | 90 ದಿನಗಳು | 400 ಗ್ರಾಂ | 36 ಕೆ.ಜಿ. |
| ಮೂರನೆಯ | 90 ದಿನಗಳು | 800 ಗ್ರಾಂ | 72 ಕೆ.ಜಿ. |
| ನಂತರದ | 90 ದಿನಗಳು | 1600 ಗ್ರಾಂ | 144 ಕೆ.ಜಿ. |

**ಮಾಹಿತಿಗಾಗಿ ಸಂಪರ್ಕಿಸಿ:**
ಡೀನ್, ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು–575002
ದೂ: 0824 224 9256

**ಪ್ರಕಟಣೆ:** ಪ.ಜಾ.ಉ.ಯೋ/ಪ.ಪಂ.ಉ.ಯೋ. ಧನ ಸಹಾಯ

## ಮೀನುಗಾರಿಕಾ ಮಹಾವಿದ್ಯಾಲಯ
## ಮಂಗಳೂರು

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ**

# ಒಳನಾಡು ಮೀನು ಕೃಷಿ



**ಪ್ರಧಾನ ಲೇಖಕರು:**
**ಡಾ. ಎ.ಟಿ. ರಾಮಚಂದ್ರ ನಾಯ್ಕ**
ಪ್ರಾಧ್ಯಾಪಕರು

**ಸಹ ಲೇಖಕರು:**
**ಡಾ. ಲಕ್ಷ್ಮೀಪತಿ ಎಂ.ಟಿ.**
ಪ್ರಾಧ್ಯಾಪಕರು

**ಶ್ರೀ ಗಣೇಶ್‌ಪ್ರಸಾದ್ ಎಲ್.**
ಸಹಾಯಕ ಪ್ರಾಧ್ಯಾಪಕರು

**ಡಾ. ರಾಜೇಶ್ ಡಿ.ಪಿ.**
ಸಹಾಯಕ ಪ್ರಾಧ್ಯಾಪಕರು

2020

ಮೀನು ಕೃಷಿಯು ಸುಲಭ ಹಾಗೂ ಕಡಿಮೆ ಖರ್ಚಿನಲ್ಲಿ ಕೈಗೊಳ್ಳಬಹುದಾದ ಲಾಭ ತರುವ ಉದ್ಯಮವಾಗಿ ಅಭಿವೃದ್ಧಿಗೊಳ್ಳುತ್ತಿದೆ. ಪ್ರಸ್ತುತ ಪ್ರಪಂಚದಲ್ಲಿ ಒಳನಾಡು ಮೀನು ಕೃಷಿಯಲ್ಲಿ ನಮ್ಮ ದೇಶ ಎರಡನೇ ಸ್ಥಾನಗಳಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನನ್ನು ಆಹಾರದಲ್ಲಿ ಬಳಸುವವರ ಸಂಖ್ಯೆ ಹೆಚ್ಚಿದ್ದರೂ ಮೀನು ಕೃಷಿ ಮಾಡುವವರ ಸಂಖ್ಯೆ ಕಡಿಮೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಲಾಭದಾಯಕ ಮೀನು ಕೃಷಿಗೆ ಯೋಗ್ಯವಾದ ಕೆರೆಗಳ ಕೊರತೆ, ವೈಜ್ಞಾನಿಕ ಮೀನು ಕೃಷಿಯಿಂದ ಪಡೆಯಬಹುದಾದ ಲಾಭದ ಬಗ್ಗೆ ಕೃಷಿಕರಿಗೆ ಮಾಹಿತಿ ಇಲ್ಲದಿರುವುದು ಹಾಗೂ ಮಾರುಕಟ್ಟೆಗಳಲ್ಲಿ ಸದಾ ಲಭ್ಯವಿರುವ ಸಮುದ್ರದ ಮೀನು.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ನೀರು ನಿಲ್ಲುವ ತಗ್ಗು ಪ್ರದೇಶಗಳು ಹಾಗೂ ಖಾಲಿ ಬಿಟ್ಟಿರುವ ಪಟ್ಟಣಗದ್ದೆಗಳು ಸಾಕಷ್ಟು ಇವೆ. ಹಾಗೂ ಜಿಲ್ಲೆಯಲ್ಲಿ ಬಹಳಷ್ಟು ಕಿಂಡಿ ಅಣೆಕಟ್ಟುಗಳು ಮತ್ತು ಕೃಷಿ ಹೊಂಡಗಳಿದ್ದು ಇವುಗಳನ್ನು ಕಡಿಮೆ ಖರ್ಚಿನಲ್ಲಿ ಮೀನು ಕೃಷಿ ಕೊಳಗಳನ್ನಾಗಿ ನಿರ್ಮಾಣ ಮಾಡಿ, ನೀರು ಸರಬರಾಜಿನ ವ್ಯವಸ್ಥೆ ಮಾಡಿಕೊಂಡಲ್ಲಿ ಲಾಭದಾಯಕ ಮಿನು ಕೃಷಿಯುನ್ನು ಅಳವಡಿಸಿಕೊಳ್ಳ ಬಹುದಾಗಿದೆ. ವೈಜ್ಞಾನಿಕ ಮೀನು ಕೃಷಿಯಲ್ಲಿ ಸಾವಯವ ಗೊಬ್ಬರಗಳನ್ನು ಬಳಸಿ, ಶೀಘ್ರವಾಗಿ ಬೆಳೆಯುವಂತಹ ಮೀನು ಮರಿಗಳನ್ನು ಕೊಳಕ್ಕೆ ಬಿಟ್ಟು ಅವುಗಳಿಗೆ ಕೃತಕ ಆಹಾರ ನೀಡುವುದರಿಂದ ಪ್ರತೀ ಎಕರೆಗೆ ಸರಾಸರಿ 2000 ಕೆ.ಜಿ.ಯಿಂದ 2500 ಕೆ.ಜಿ. ಮೀನನ್ನು ಉತ್ಪಾದಿಸಿ ರೂ. 40,000 ಕ್ಕೂ ಅಧಿಕ ಲಾಭ ಪಡೆಯಬಹುದಾಗಿದೆ. ವೈಜ್ಞಾನಿಕ ಮೀನು ಕೃಷಿಯುನ್ನು ಕೈಗೊಳ್ಳುವುದರಿಂದ ಗ್ರಾಮೀಣ ಜನತೆಗೆ ಕಡಿಮೆ ದರದಲ್ಲಿ ಪೌಷ್ಠಿಕ ಆಹಾರವನ್ನು ದೊರಕಿಸಿದಂತೆ ಆಗುವುದಲ್ಲದೆ ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡಿದಂತಾಗುತ್ತದೆ.

## ಲಾಭದಾಯಕ ಮೀನು ಕೃಷಿ ಕೈಗೊಳ್ಳಲು ಪಾಲಿಸಬೇಕಾದ ಕ್ರಮಗಳು

### 1. ಕೃಷಿ ಕೊಳದ ನಿರ್ಮಾಣ

- ಮೀನಿನ ಕೊಳಗಳನ್ನು ಮಣ್ಣಿನಿಂದ ನಿರ್ಮಿಸುವುದರಿಂದ ಕೊಳದ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳಬಹುದು ಮತ್ತು ಕೊಳದ ನಿರ್ಮಾಣದ ವೆಚ್ಚವನ್ನು ಕಡಿಮೆ ಮಾಡಬಹುದು.
- ಕೊಳಗಳನ್ನು ಆಯತಾಕಾರದಲ್ಲಿ ನಿರ್ಮಿಸಿದರೆ ಮೀನು ಕೃಷಿ ನಿರ್ವಹಣೆಯಲ್ಲಿ ಅನುಕೂಲವಾಗುತ್ತದೆ.
- ಕೊಳಗಳನ್ನು ನಿರ್ಮಿಸುವಾಗ 2 ಅಡಿಗಿಂತ ಹೆಚ್ಚು ಮಣ್ಣನ್ನು ಅಗೆಯದೆ, ಅಗೆದ ಮಣ್ಣನ್ನು ಕೊಳದ ಸುತ್ತಲೂ ಬದುಗಳನ್ನು ನಿರ್ಮಿಸಲು ಬಳಸಬೇಕು.
- ಕೊಳದಲ್ಲಿ ಸುಮಾರು 4ರಿಂದ 6 ಅಡಿ ನೀರು ನಿಲ್ಲುವಂತೆ ಬದುವನ್ನು ನಿರ್ಮಿಸಬೇಕು. (ಕನಿಷ್ಠ 4–6 ಅಡಿ ಆಳ ಇರುವ 6 ರಿಂದ 8 ತಿಂಗಳು ನೀರು ಹೊಂದಿರುವ ಕೊಳಗಳು ಮೀನು ಕೃಷಿಗೆ ಯೋಗ್ಯ) ಬದುವಿನ ಇಳಿಜಾರು 1:2 ಶ್ರೇಣಿಯಲ್ಲಿ ಇರಬೇಕು. ಅಂದರೆ ಬದುವಿನ ಮೇಲ್ಭಾಗ 4 ಅಡಿ ಇದ್ದರೆ ತಳಭಾಗ 8 ಅಡಿ ಇರಬೇಕು.
- ಕೊಳದ ನೀರು ಬಸಿದು ಹೋಗದಂತೆ ತಡೆಯಲು ಕೊಳದ ತಳಭಾಗಕ್ಕೆ ಮತ್ತು ಪಾರ್ಶ್ವಗಳ ಒಳಭಾಗಗಳಿಗೆ ಜೇಡಿ ಮಣ್ಣಿನಿಂದ ಲೇಪಿಸಬೇಕು ಹಾಗೂ ಬದುಗಳಿಗೆ ಒಳ್ಳೆಯ ಹುಲ್ಲನ್ನು ಹಚ್ಚಿ ಬೆಳೆಸುವುದರಿಂದ ಮಣ್ಣು ಕೊಚ್ಚಿ ಹೋಗದಂತೆ ತಡೆಯಬಹುದು.
- ಕೊಳಕ್ಕೆ ನೀರು ತುಂಬಿಸುವ ತೂಬು ಗರಿಷ್ಠ ನೀರಿನ ಮಟ್ಟಕ್ಕಿಂತ ½ ಮೀ. ಎತ್ತರದಲ್ಲಿರಬೇಕು. ಕೊಳದಿಂದ ಹೊರ ಬಿಡುವ ನೀರಿನ ತೂಬು ಕೊಳದ ಇಳಿಜಾರು ಜಾಗದಲ್ಲಿ ಇರಬೇಕು.
- ಕೊಳದಲ್ಲಿ ಬಿಟ್ಟ ಮೀನು ಮರಿಗಳು ಕೊಳದಿಂದ ಹೊರಕ್ಕೆ ಹೋಗದಂತೆ ಮತ್ತು ಅನುಪಯುಕ್ತ ಮೀನುಗಳು ಕೊಳದ ಒಳಗೆ ಬಾರದಂತೆ ತಡೆಯಲು ತೂಬುಗಳಿಗೆ ಕಣ್ಣಿನ ಜಾಲರಿಯನ್ನು ಅಳವಡಿಸಬೇಕು.

### 2. ಕೊಳದ ಸಿದ್ಧತೆ

- ಉತ್ತಮ ಮೀನಿನ ಬೆಳವಣಿಗೆಗೆ ಕೊಳದ ಮಣ್ಣು ಮತ್ತು ನೀರಿನ ರಸಸಾರವು 7.5 ರಿಂದ 8.0 ಪಿ.ಪಿ.ಎಂ. ನಷ್ಟಿರಬೇಕು.
- ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಮಣ್ಣು ಹುಳಿಯಿಂದ ಕೂಡಿದ್ದು ಮಣ್ಣಿನ ರಸಸಾರವು 7.0ಕ್ಕಿಂತ ಕಡಿಮೆ ಇರುತ್ತದೆ. ಆದ್ದರಿಂದ ಮಣ್ಣಿನ ರಸಸಾರವನ್ನು ಸರಿಪಡಿಸಲು 50ಕೆ.ಜಿ. ಚಿಪ್ಪು ಸುಣ್ಣವನ್ನು ಕೊಳದ ಮಣ್ಣಿಗೆ ಸೇರಿಸಿ, ನಂತರ ಕೊಳದ 2 ಅಡಿ ಮಟ್ಟಕ್ಕೆ ನೀರು ತುಂಬಿಸಬೇಕು.
- ಮೀನಿಗೆ ಅಗತ್ಯವಿರುವ ನೈಸರ್ಗಿಕ ಆಹಾರವನ್ನು ಉತ್ಪಾದಿಸಲು ಕೊಳದ ನೀರಿಗೆ 200 ಕೆ.ಜಿ. ದನದ ಸೆಗಣಿ ಅಥವಾ 100 ಕೆ.ಜಿ. ಕೋಳಿ ಗೊಬ್ಬರವನ್ನು ಹಾಕಬೇಕು ಅಥವಾ ಎರಡನ್ನು ಸಮಪ್ರಮಾಣದಲ್ಲಿ ಮಿಶ್ರಣ ಮಾಡಿ ಹಾಕಿದರೆ ಒಳ್ಳೆಯದು. ಗೊಬ್ಬರವನ್ನು ಮರಿಗಳನ್ನು ಬಿಡುವುದಕ್ಕಿಂತ 10 ರಿಂದ 15 ದಿವಸಗಳ ಮೊದಲು ಹಾಕಬೇಕು.
- ಮೀನು ಮರಿಗಳನ್ನು ಕೊಳಕ್ಕೆ ಬಿಡುವ ಎರಡು ದಿವಸಗಳ ಮೊದಲು ಕೊಳದ ನೀರಿನ ಮಟ್ಟವನ್ನು ಗರಿಷ್ಠ 6 ಹೆಚ್ಚಿಸಬೇಕು.
- ಕೊಳದಲ್ಲಿ ನೈಸರ್ಗಿಕ ಆಹಾರದ ಉತ್ಪಾದನೆ ನಿರಂತರವಾಗಿರಲು ಪ್ರತಿತಿಂಗಳು 100 ಕೆ.ಜಿ. ದನದ ಸಗಣಿಯನ್ನಾಗಲಿ ಅಥವಾ 50 ಕೆ.ಜಿ. ಕೋಳಿ ಗೊಬ್ಬರವನ್ನಾಗಲಿ ಕೊಳಕ್ಕೆ ಹಾಕಬೇಕು ಮತ್ತು 5 ಕೆ.ಜಿ. ಸೂಪರ್‌ಫಾಸ್ಫೇಟ್ ಮತ್ತು 2.5 ಕೆ.ಜಿ. ಯೂರಿಯ ಎರಡು ತಿಂಗಳಿಗೊಮ್ಮೆ ಕೊಳಕ್ಕೆ ಹಾಕಬೇಕು. ಮೀನು ಮರಿಗಳನ್ನು ಕೊಳಕ್ಕೆ ಬಿಡುವುದು ಶೀಘ್ರವಾಗಿ ಬೆಳೆಯಬಲ್ಲ ಬೆರಳುದ್ದ ಗಾತ್ರದ (5 ರಿಂದ 8 ಸೆ.ಮೀ.) 1000 ಗಂಡೆ ಮೀನು (400 ಕಾಟ್ಲ, 400 ರೋಹು, 200 ಮೃಗಾಲ್) ಮರಿಗಳನ್ನು ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಕೊಳದಲ್ಲಿ ಬಿಡಬೇಕು. ಕಾಟ್ಲ ಮತ್ತು ರೋಹು ಮಾತ್ರ ಲಭ್ಯವಿದ್ದರೆ ಎರಡನ್ನು ಸಮಪ್ರಮಾಣದಲ್ಲಿ ಬಿಡಬೇಕು. ಕೃತಕ ಆಹಾರ ನೀಡುವುದು.
- ಕೊಳದಲ್ಲಿ ಉತ್ಪತ್ತಿಯಾಗುವ ನೈಸರ್ಗಿ ಆಹಾರವು ಮೀನುಗಳ ಶೀಘ್ರ ಬೆಳವಣಿಗೆ ಸಾಕಾಗುವುದಿಲ್ಲ. ಆದ್ದರಿಂದ ಕೃತಕ ಆಹಾರ ನೀಡುವುದು ಅವಶ್ಯಕ.
- ಕೃತಕ ಆಹಾರವಾದ ಅಕ್ಕಿ ಪಾಲಿಶ್ (ತೌಡು) ಮತ್ತು ನೆಲಗಡಲೆ ಹಿಂಡಿಯನ್ನು 1:1 ರ ಪ್ರಮಾಣದಲ್ಲಿ ಮಿಶ್ರಣ ಮಾಡಿ ರಂಧ್ರ ಮಾಡಿದ ಖಾಲಿ ಗೊಬ್ಬರದ ಚೀಲಗಳಲ್ಲಿ ತುಂಬಿ ಕೊಳದ ಒಂದೆರಡು ಜಾಗಗಳಲ್ಲಿ ನೀರಿನಲ್ಲಿ ಸ್ವಲ್ಪ ಮುಳುಗುವಂತೆ ತೂಗಿ ಬಿಡುವುದು ಒಳ್ಳೆಯದು. ಸಮಪ್ರಮಾಣದಲ್ಲಿ ಬೆರೆಸಿದ ಹಿಂಡಿ ಮತ್ತು ಅಕ್ಕಿ ತೌಡನ್ನು ದಿನಕ್ಕೊಮ್ಮೆ ಮೀನಿನ ತೂಕದ ಶೇಕಡ 3 ರಷ್ಟು ಕೊಡಬೇಕು.

### 3. ಕೃತಕ ಆಹಾರ ನೀಡುವಿಕೆ

ಮೀನುಗಳು ಕಡಿಮೆ ಅವಧಿಯಲ್ಲಿ ಶೀಘ್ರ ಬೆಳವಣಿಗೆ ಹೊಂದಲು ಕೃತಕ ಆಹಾರವನ್ನು ನೀಡುವುದು ಅತ್ಯಗತ್ಯ. ಅಕ್ಕಿತೌಡು, ಕಡಲೆಕಾಯಿ ಹಿಂಡಿ, ಜೋಳ, ಕೋಳಿ ತ್ಯಾಜ್ಯದಿಂದ ತಯಾರಿಸಿದ ಮೀಟ್‌ಮೀಲ್, ಅಡಿಗೆ ತ್ಯಾಜ್ಯ (ಎಣ್ಣೆ ರಹಿತ) ಮತ್ತು ಇನ್ನಿತರೆ ಪದಾರ್ಥಗಳನ್ನು ಆಹಾರವಾಗಿ ಬಳಸಬಹುದು.